


ಮಾಧವನ್: ನನ್ನ ಮಗ ಯಾವಾಗಲೂ ಚಾಟ್ಸ್ ತಿನ್ನುತ್ತಿದ್ದಾನೆ ಡಾಕ್ಟರೇ!

ಡಾಕ್ಟರ್: ಅದಕ್ಕೆ ನಾನೇನು ಮಾಡ ಬೇಕು?

ಮಾಧವನ್: 'ಆಗಾಗ ಅಪ್ಪನಿಗೆ ಕೊಟ್ಟು ತಿನ್ನು ಮರಿ' ಎಂದು ನೀವು ಅವನಿಗೆ ಬುದ್ಧಿ ಮಾತು ಹೇಳ ಬೇಕು.

★★★

ಸುರೇಶ: ಆ ಪರಮೇಶ್ವರನಿಂದ ಫೋನ್ ಕರೆ ಬರುವಾಗಲೆಲ್ಲಾ ಯಾಕೆ ಡಾಕ್ಟ್ರೇ ನಿಮ್ಮ ಮುಖ 'ದೆವ್ವ ಹೊಡೆದವರ ಮುಖ ಹಾಗೆ' ಬದಲಾಗುತ್ತಿದೆ?

ಡಾಕ್ಟರ್: ನಾನು ಮಾಡಿದ ಆಪರೇಷನ್ ವಿಫಲವಾಗಿ ಆ ಪರಮೇಶ್ವರನ್ ಕಳೆದ ವಾರನೇ ತೀರಿ ಹೋದನು.

★★★

ತಾಯಿ: ದೇವಸ್ಥಾನದಲ್ಲಿ ಚಪ್ಪಲಿಯನ್ನು ಕಾಯೋಕೆ ಟೋಕನ್ ಕೊಡುವವರ ಬಳಿ ಯಾಕೆ ಜಗಳವಾಡಿದೆ?

ಮಗ: ಆಧಾರ್ ಕಾರ್ಡ್ ನಂಬರ್ ಕೇಳುತ್ತಾರಮ್ಮ ಅವರು.

★★★

ರಾಜು: ನಿಮ್ಮ ಮನೆಯ ನಾಯಿ ಮರಿಗಳನ್ನು ಸಂಜೆ ನಮ್ಮ ಮನೆಗೆ ಕಳುಹಿಸಿ ಕೊಡ್ತೀರಾ ಆಂಟಿ?

ಆಂಟಿ : ಯಾಕೆ ರಾಜು?

ರಾಜು: ನಮ್ಮ ಮನೆಯ ಟಾಮಿಗೆ ಇವತ್ತು ಹುಟ್ಟು ಹಬ್ಬ. ಕೇಕ್ ಕಟ್ ಮಾಡ್ತೀವಿ, ಅದಕ್ಕೆ!

■ **ಡಾ. ವಿ. ಪುಗಳೇಂದಿ, ಬಳ್ಳಾರಿ**

ಪತ್ನಿ: ಆ ಸೀರೆ ನನಗೆ ತುಂಬಾ 'ಇಷ್ಟ' ಆಯ್ತು . ತೆಗೊಳ್ತೀನೆ , ಹಣ ಕೊಡಿ.

ಪತಿ: ಬೇಡ ಕಣೇ, ಒಂದ್ಸಲ ಉಡೋದೂ ಡೌಟು!

ಪತ್ನಿ: ಅದ್ಯಾಕೆ ಹಾಗೆ ಹೇಳ್ತೀರಾ? ಯಾವತ್ತಾದರೂ ನಾನು ಹಾಗೆ ಮಾಡಿದ್ದೆನಾ?

ಪತಿ: ಮಾಡಿದ್ದೀಯಲ್ಲ .. ಮದುವೆಗೆ ಮುಂಚೆ ನಾನೆಂದ್ರೆ ನಿನಗೆಷ್ಟು 'ಇಷ್ಟ' ಇತ್ತು !

★★★

ಗುಂಡ: ನನ್ನ ಲವ್ ಶೇ. 50 ಸಕ್ಸಸ್ ಆಗಿದೆ! ಅದಕ್ಕೆ ತಂಬಾ ಖುಷಿ!

ಪುಂಡ: ಅಂದರೆ ? ನಿನ್ನ ಪ್ರೇಮ ಪತ್ರಕ್ಕೆ ಉತ್ತರ ಬಂತಾ?

ಗುಂಡ: ಇಲ್ಲ .. ಆದರೆ ನಾನು ಬರೆಯೋದು ಮುಗೀತು , ಪೋಸ್ಟ್ ಮಾಡೋದು ಮುಗೀತು! ಇನ್ನು ಉಳಿದ ಐವತ್ತು ಶೇಕಡಾ ಅಂದರೆ ಅವಳು ಬರೆಯೋದು, ಪೋಸ್ಟ್ ಮಾಡೋದು ಮಾತ್ರಾ ಬಾಕಿ!

★★★

ಅವನು: ಪರಸ್ತ್ರೀ ವ್ಯಾಮೋಹ ತುಂಬ ಕೆಟ್ಟದ್ದಂತೆ ಕಣೇ..

ಅವಳು: ಅದು ನಿಮಗೆ ನೆನಪಿದ್ದರೆ ಒಳ್ಳೇದು, ಅಲ್ವಾ?

ಅವನು: ಆದರೆ ನಿನಗೂ ನೆನಪಿದ್ದರೆ ಒಳ್ಳೇದು. ಪಕ್ಕದ ಮನೆಯೋಳ ವ್ಯಾಮೋಹ ನಿನಗೆ! ಅವಳ ಹತ್ತಿರ ಗಂಟೆಗಟ್ಟಲೆ ಹರಟೆ ಕೊಚ್ಚೋದು ನಿಲ್ಲಿಸು ಮಾರಾಯ್ತಿ!

■ **ರವಿರಾಜ್ ಹಾಲಂಬಿ**


# ಕೈಲಾಸ ಜೀವನ

ಶಾಂತ, ತಂಪು, ಮಲ್ಟಿಪರ್ಪಸ್ ಆಯುರ್ವೇದಿಕ್ ಕ್ರೀಮ್



| ಹಿಮ್ಮಡಿಗಳ ಬಿರಿತ | ಮೊಡವೆಗಳು |
| ಕೈ ಕಾಲು ಮತ್ತು ಕಣ್ಣುಗಳ ಉರಿತ |
| ಮೂಲವ್ಯಾಧಿ | ಕೊಯ್ತ | ಉರಿತ |
ಮೊದಲಾದವಕ್ಕೆ ಗುಣಕಾರಕ




anunaad.com

Available in all medical stores
12g, 20g Tube, 30g, 60g, 120g, 230g Bottle

I Manufacturer: **ASUM**, Pune. **020-24486865** I Customer Care: Rahul: **94816 00865**, Datta: **0 91300 26068** I **asumkj@gmail.com** I **www.asum.com** I

**Distributor: Yellapur:** Shri Rama Stores: **08419-262180** I **Bangalore:** Mohan Pharma: **080-22874575** I **Mangalore:** Vivek Traders: **0824-2496963** I **Bellary:** Kalwa Agencies: **9379999406** I **Belgaum:** Satyam Ayurvedic & Gen. Distributor: **0831-4206784**